ಫ್ರೀಡಂ ನ್ಯೂಸ್
ಫ್ರೀಡಂ TV NEWS
ಜನಸಾಮಾನ್ಯರ ಶಕ್ತಿ

# ಬೆಂಗಳೂರಲ್ಲಿ ಗ್ಯಾಸ್ ಅಭಾವದ ಎಫೆಕ್ಟ್

## ಹೋಟೆಲ್ ತಿಂಡಿಗಳ ದರ ಏರಿಕೆ, ಗ್ರಾಹಕರ ಜೇಬಿಗೆ ಬಿಸಿ!




**ಬೆಂಗಳೂರು:** ಅಂತರಾಷ್ಟ್ರೀಯ ಮಟ್ಟದಲ್ಲಿ ಅಮೆರಿಕ, ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ಪರಿಣಾಮವಾಗಿ ಎಲ್‌ಪಿಜಿ ಗ್ಯಾಸ್ ಪೂರೈಕೆಯಲ್ಲಿ ತೀವ್ರ ವ್ಯತ್ಯಯ ಉಂಟಾಗಿದ್ದು, ಇದರ ನೇರ ಹೊಡೆತ ಬೆಂಗಳೂರಿನ ಹೋಟೆಲ್ ಉದ್ಯಮದ ಮೇಲೆ ಬಿದ್ದಿದೆ. ನಗರದಲ್ಲಿ ವಾಣಿಜ್ಯ ಸಿಲಿಂಡರ್‌ಗಳ ಕೊರತೆ ಎದುರಾಗಿರುವ ಹಿನ್ನೆಲೆಯಲ್ಲಿ, ಹೋಟೆಲ್ ಮಾಲೀಕರು ಅನಿವಾರ್ಯವಾಗಿ ಕಾಳಸಂತೆಯಲ್ಲಿ ದುಬಾರಿ ಬೆಲೆ ನೀಡಿ ಗ್ಯಾಸ್ ಖರೀದಿಸುತ್ತಿದ್ದಾರೆ. ಸಾಮಾನ್ಯ ದರಕ್ಕಿಂತ ಎರಡರಷ್ಟು ಹಣ ವ್ಯಯಿಸಿ ಸಿಲಿಂಡರ್ ಪಡೆಯಬೇಕಾದ ಅನಿವಾರ್ಯತೆಯಿಂದಾಗಿ, ಹೋಟೆಲ್ ವ್ಯವಹಾರವನ್ನು ಸರಿದೂಗಿಸಲು ಆಹಾರ ಪದಾರ್ಥಗಳ ಬೆಲೆಯನ್ನು ಏರಿಕೆ ಮಾಡಲಾಗುತ್ತಿದೆ.

ಗ್ಯಾಸ್ ದರ ಏರಿಕೆಯ ಈ ಬಿಸಿ ಇದೀಗ ನೇರವಾಗಿ ಗ್ರಾಹಕರ ಜೇಬಿಗೆ ತಟ್ಟುತ್ತಿದೆ. ನಗರದ ಪ್ರಮುಖ ಹೋಟೆಲ್‌ಗಳಲ್ಲಿ ಇಡ್ಲಿ, ದೋಸೆ ಸೇರಿದಂತೆ ಬಹುತೇಕ ತಿಂಡಿಗಳ ಬೆಲೆಯನ್ನು ಸರಿಸುಮಾರು 10 ರೂಪಾಯಿಗಳಷ್ಟು ಹೆಚ್ಚಿಸಲಾಗಿದೆ. ವಿಶೇಷವಾಗಿ ಶಿವಾನಂದ ಸರ್ಕಲ್ ಬಳಿಯ ಜನಪ್ರಿಯ 'ಬೆಂಗಳೂರು ಕೆಫೆ' ಸೇರಿದಂತೆ ಅನೇಕ ಹೋಟೆಲ್‌ಗಳಲ್ಲಿ ಈಗಾಗಲೇ ಹಳೆಯ ದರದ ಪಟ್ಟಿಯನ್ನು ಬದಲಿಸಿ ಹೊಸ ದರವನ್ನು ಪ್ರದರ್ಶಿಸಲಾಗುತ್ತಿದೆ. ಹೋಟೆಲ್ ಮಾಲೀಕರು ಅನಿವಾರ್ಯವಾಗಿ ಕೈಗೊಂಡಿರುವ ಈ ನಿರ್ಧಾರದಿಂದ ಮಧ್ಯಮ ವರ್ಗದ ಜನರಿಗೆ ಹೋಟೆಲ್ ತಿಂಡಿ ಕೂಡ ಈಗ ದುಬಾರಿಯಾದಂತಾಗಿದೆ.

# ಲೋಕಾಯುಕ್ತ ಬಲೆಗೆ ಉಡುಪಿ ಅಬಕಾರಿ ಡಿಸಿ; 8.69 ಕೋಟಿ ರೂ. ಅಕ್ರಮ ಆಸ್ತಿ ಪತ್ತೆ!



**ಉಡುಪಿ:** ಅಕ್ರಮ ಆಸ್ತಿ ಗಳಿಕೆ ಆರೋಪದ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲಾ ಅಬಕಾರಿ ಉಪ ಆಯುಕ್ತ (DC) ಶ್ರೀನಿವಾಸ್ ಟಿ.ಎಂ. ಅವರಿಗೆ ಲೋಕಾಯುಕ್ತ ಅಧಿಕಾರಿಗಳು ಶಾಕ್ ನೀಡಿದ್ದಾರೆ. ಮಂಗಳೂರು ಲೋಕಾಯುಕ್ತ ಎಸ್ಪಿ ದಿನೇಶ್ ಕುಮಾರ್ ನೇತೃತ್ವದಲ್ಲಿ ರಾಜ್ಯದ 15 ವಿವಿಧ ಸ್ಥಳಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಲಾಗಿದ್ದು, ಬರೋಬ್ಬರಿ 8 ಕೋಟಿ 69 ಲಕ್ಷ ರೂಪಾಯಿ ಮೌಲ್ಯದ ಅಕ್ರಮ ಆಸ್ತಿಯನ್ನು ಪತ್ತೆಹಚ್ಚಲಾಗಿದೆ.

ತನಿಖೆಯ ವೇಳೆ ಅಧಿಕಾರಿಗಳು ಶ್ರೀನಿವಾಸ್ ಅವರ ಹೆಸರಿನಲ್ಲಿದ್ದ 11 ನಿವೇಶನಗಳು, 6 ಸುಸಜ್ಜಿತ ಮನೆಗಳು ಹಾಗೂ 31 ಎಕರೆ ಕೃಷಿ ಭೂಮಿಯನ್ನು ಪತ್ತೆಹಚ್ಚಿದ್ದಾರೆ. ಕೇವಲ ಸ್ಥಿರಾಸ್ತಿಯಷ್ಟೇ ಅಲ್ಲದೆ, 1.47 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು, 17 ಲಕ್ಷ ರೂ. ಮೌಲ್ಯದ ಕಾರುಗಳು ಹಾಗೂ ಲಕ್ಷಾಂತರ ರೂಪಾಯಿ ನಗದನ್ನು ಜಪ್ತಿ ಮಾಡಲಾಗಿದೆ. ಆದಾಯದ ಮೂಲಕ್ಕಿಂತಲೂ ಅಧಿಕ ಆಸ್ತಿ ಹೊಂದಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಮಾರ್ಚ್ 13 ರಿಂದ ಅಧಿಕೃತ ತನಿಖೆ ಆರಂಭವಾಗಿದ್ದು, ಪತ್ತೆಯಾದ ದಾಖಲೆಗಳ ಕುರಿತು ಅಧಿಕಾರಿಗಳಿಂದ ವಿಚಾರಣೆ ಮುಂದುವರಿದಿದೆ. ಭ್ರಷ್ಟಾಚಾರದ ಗಂಭೀರ ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ, ಲೋಕಾಯುಕ್ತರ ಪ್ರಾಥಮಿಕ ವರದಿ ಆಧರಿಸಿ ಅಬಕಾರಿ ಇಲಾಖೆಯು ಶ್ರೀನಿವಾಸ್ ಅವರನ್ನು ಮುಂದಿನ ಒಂದೆರಡು ದಿನಗಳಲ್ಲಿ ಸೇವೆಯಿಂದ ಅಮಾನತುಗೊಳಿಸುವ ಸಾಧ್ಯತೆಯಿದೆ.


# ಸಂಪಾದಕೀಯ




ಎಲ್. ಎಂ. ನಾಗರಾಜು
ಪ್ರಧಾನ ಸಂಪಾದಕರು

## ರಶ್ಮಿಕಾ, ಯಶ್‌ರ ಸೀಮೋಲ್ಲಂಘನ...ಇವರವ್ವಂದಿರ ಅಧ್ವಾನ..!





ನಾನೂ ಗೆಲ್ಲಬೇಕು. ಸೆಲೆಬ್ರಿಟಿಯಾಗಬೇಕು. ಸಕ್ಸಸ್ ಕಾಣಬೇಕು. ನನ್ನ ಕಂಡರೆ ಜನ ಸೆಲ್ಫಿ ತಗೋಬೇಕು.... ಇದು ಎಲ್ಲರ ಕನಸು. ಆದರೆ, ಸಕ್ಸಸ್ ಸುಮ್ಮನೆ ಸಿಗಬೇಕಲ್ಲ. ಸಕ್ಸಸ್ ಗೆ ಎಲ್ಲಿರುತ್ತೆ ಹೇಳಿ ಶಾರ್ಟ್ ಕಟ್. ಅದಕ್ಕಾಗಿ ಬೆವರು, ರಕ್ತ ಬಸಿಯಬೇಕು. ಏಕಾಂತದಲ್ಲಿ ಕಣ್ಣೀರುಗರೆಯಬೇಕು. ಕಠಿಣಾತಿಕಠಿಣ ತೀರ್ಮಾನ ಮಾಡಬೇಕು. ಭಯ ಹತಾಷೆ, ದುಃಖದ ಮಡಿಲಲ್ಲಿ ಈಜಬೇಕು. ಮುಗಿದೇ ಹೋಯಿತು ಅನ್ನೋ ಶೂನ್ಯ ದಾಟಿ ಸೋಲದೆ ಮುಂದುವರಿಲೇಬೇಕು. ಈ ಕಠಿಣ ಹಾದಿ ಎಲ್ಲರಿಗೂ ದಕ್ಕಲ್ಲ. ಗೆಲುವು ಎಂಬುದು ಸಾವು ಬದುಕಿನ ಮಾನಸಿಕ ಹೋರಾಟ. ಇಂಥದ್ದೇ ಹಾದಿ ಕ್ರಮಿಸಿ ಗೆಲವು ಕಂಡವರು ನಮ್ಮ ಸ್ಯಾಂಡಲ್ ವುಡ್ ನ ನಟರಾದ ಯಶ್ ಮತ್ತು ನಟಿ ರಶ್ಮಿಕಾ.

ಎಲ್ಲೋ ಇದ್ದ ಯಶ್ ಆಗಸಕ್ಕೆ ಬೆಳೆದುಬಿಟ್ಟರು ಕಾಲೆಳೆವ ಜನ ತಲೆಯೆತ್ತಿ ನೋಡುವಂತೆ. ಯಾರೂ ಇಗ್ನೋರ್ ಮಾಡಲು ಸಾಧ್ಯವೇ ಇಲ್ಲದಂತೆ. ಒಂದು ಚಾನ್ಸ್ ಗಾಗಿ ಆಸೆಗಣ್ಣಿಂದ ಕಾಯುತ್ತಿದ್ದ ಬಾಲಕಿ ರಶ್ಮಿಕಾ ಇಂದು ಮುಗಿಲ ಮಲ್ಲಿಗೆ. ಸಣ್ಣ ಚಾನ್ಸ್ ಗಾಗಿ ರಕ್ಷಿತ್ ಶೆಟ್ಟಿ ಸಿಕ್ಕರೆ ಸಾಕೆಂದುಕೊಂಡಿದ್ದ ರಶ್ಮಿಕಾ ಧಿಡೀರ್ ಪ್ಯಾನ್ ಇಂಡಿಯಾ ನಟಿಯಾಗಿಬಿಟ್ಟರು. ಅದು ಆಕೆಯ ರಿಸ್ಕ್, ಆಕೆಯ ಎಫರ್ಟ್. ಎಷ್ಟು ಬೆಳೆದರೇನಂತೆ ಈ ಇಬ್ಬರು ನತದೃಷ್ಟರಿಗೆ ನೆಮ್ಮದಿ ಕೊಂಚ ದೂರವೇ ಉಳಿದುಬಿಟ್ಟಿದೆ. ಗೆಲುವಿನ ಸವಿಯ ಹೊತ್ತಲ್ಲೇ ಇವರ ಮೂಲದ ಶಾಪ ಇವರನು ಕಾಡಿ ನಕ್ಕ ಮರುಕ್ಷಣವೇ ಖೇದಕ್ಕೆ ದೂಡುತ್ತಿದೆ.ಯಾವ ಮೂಲವು ಇವರ ಗೆಲುವಿಗೆ ನೀರು ಎರೆದಿದೆಯೋ ಅದೇ ಮೂಲ ಈ ಸಾಧಕರಿಗೆ ಆಗಾಗ ಚುಚ್ಚಿ ನೋಯಿಸುತ್ತಿದೆ.

ತನ್ನ ಊರ ಕೆರೆಗೆ ನಾಲ್ಕು ಕೋಟಿ ದೇಣಿಗೆ ಕೊಡುವ ಯಶ್ ಪಾಲಿಗೆ ಆತನ ತಾಯಿ ಮಾಡುವ ಒಂದು ಚೀಟಿ ವ್ಯವಹಾರ ದುಬಾರಿಯಾಗ್ತಿದೆ.ಆಕೆ ಬೀದಿಗೆ ನಿಂತು ಸೆಡ್ಡು ಹೊಡೆವ ಕಾಂಪೌಂಡ್ ಕಿರಿಕ್ ಯಶ್ ಅವರ ಕಣ್ಣಲ್ಲಿ ಮತ್ತೆ ಬಾಲ್ಯದ ಅವಮಾನದ ಕಣ್ಣೀರನ್ನು ತರಿಸುತ್ತದೆ. ತನ್ನ ಹಡೆದವ್ವಳ ಹಠದ ಎದುರು ಆತನದ್ದು ನಿಸ್ಸಹಾಯಕ ಸ್ಥಿತಿ, ಕಡುಭ್ರಷ್ಟ ಅಧಿಕಾರಿ ಎದುರು ನಿಂತ ಬಡ ರೈತನಂತೆ.

ತನ್ನ ನಟನೆಯಿಂದ ಸಹೃದಯರ ಕಣ್ಣು ತೇವಗೊಳಿಸುವ, ದುಃಖಿತ ಮನಗಳಿಗೆ ಪ್ರೀತಿಯ ಸಿಂಚನ ಕೊಡುವ ರಶ್ಮಿಕಾ ಅವರ ಖಾಸಗಿ ಸ್ಥಿತಿಯೂ ಅದೇ. ಆಕೆಯನ್ನು ಬಿಟ್ಟೂಬಿಡದೆ ಕಾಡುವ ಬಾಲ್ಯದ ಕಹಿ ಘಟನೆ. ಆಕೆಯ ತಾಯಿ ಆಡಿರುವ ಮಾತುಗಳಲ್ಲಿ ಅವರ ವ್ಯಕ್ತಿತ್ವ ವ್ಯಕ್ತವಾಗಿದೆ. ಇದನ್ನೇ ಹಿಡಿದು ರಶ್ಮಿಕಾ ಮೇಲೆ ದಾಳಿ. ಜತೆಗೆ ಇಂಡಸ್ಟ್ರಿ ಯಲ್ಲಿ ಕ್ಲಿಕ್ ಆದಳು ಎಂಬ ಅಸೂಯೆ. ಪ್ರಪೋಗಾಂಡ ಪೂರಿತ ಪ್ರಶ್ನೆಗಳು ರಶ್ಮಿಕಾಳನ್ನು ಜರ್ಝರಿತವಾಗಿಸುತ್ತಿವೆ. ಮದುವೆಯ ಮೆಹಂದಿ ಅಳಿಸುವ ಮುನ್ನವೇ ಆಕೆಯನ್ನು ಅಳಿಸಲಾಗ್ತಿದೆ. ದಾಂಪತ್ಯದ ಸುಖದ ಎದುರು ಇರಿವ ಮಾತುಗಳ ವಿಘ್ನ.

ನಮ್ಮ ಸಮಾಜವೇ ಹಾಗೆ. ಅದು ಬಹುತೇಕ ಸಾಧಕರನ್ನು ಹೀಗೆಯೇ ಅಳಿಸುತ್ತದೆ. ವಿಭಿನ್ನವಾಗಿರುವವರ ಮೇಲೆ ನಿತ್ಯ ದಾಳಿ. ಅವರ ಮುಖಕ್ಕೆ ಮಸಿ ಬಳಿವಲ್ಲಿ ಜನಕ್ಕೆ ಏನೋ ಒಂದು ಖುಷಿ. ಸಮಾಜದ ಈ ವಿಕೃತ ಸಂತೋಷಕ್ಕೆ ಸೆಲಬ್ರಿಟಿಗಳೇ ಬಲಿಪಶುಗಳು. ಕೆಲವರು ಏಕಾಂತದಲ್ಲಿ ಅತ್ತರೆ, ಕೆಲವರದ್ದು ಸಾರ್ವಜನಿಕವಾಗಿ ನೇಣುಗಂಬಕ್ಕೆ ಏರುವ ಸ್ಥಿತಿ. ಇಂಥ ಅಸಹಾಯಕ ಸ್ಥಿತಿ ಕೇವಲ ಸೆಲಬ್ರಿಟಿಗಳಿಗಷ್ಟೇ ಸೀಮಿತವಲ್ಲ. ನಿಮ್ಮ ಊರಲ್ಲಿ, ಕೆಲಸದ ಜಾಗದಲ್ಲಿ ಕೊಂಚ ಮೇಲೆ ಬಂದವನೂ ಈ ಶಿಕ್ಷೆಗೆ ಗುರಿಯಾಗಲೇಬೇಕು. ಕೊಂಚ ಭಿನ್ನವಾಗಿ ಯೋಚಿಸುವ, ಸಾಧನೆಯ ಕನಸು ಕಾಣುವವರ ಪಾಲಿಗೆ ಅವರ ಸ್ನೇಹಿತರು, ನೆಂಟರಿಸ್ಟರು, ಸಹೋದ್ಯೋಗಿಗಳು, ಕಾಂಪಿಟೇಟರ್ ಗಳೇ ಶತೃಗಳು. ಅವನು ಅವಳು ಎಷ್ಟೇ ಬೆಳೆದರೂ ಸಮಾಜ ಅವರನ್ನು ನಿನ್ನ ಜಾಗ ಇಲ್ಲಿದೆ ಎನ್ನುತ್ತಾ ತಾವಿರುವ ಗಟಾರಕ್ಕೆ ಎಳೆಯುತ್ತದೆ.

ಉ ಕ ರಾಜಕಾರಣಿಯೊಬ್ಬ ಬಾರ್ ಗರ್ಲ್ ಗೆ ಮಗು ಕರುಣಿಸಿ ಆಕೆಯ ರಾಜಕಾರಣಿ ಪತ್ನಿವೈ ನೆಮ್ಮದಿ ಕಸಿದುಬಿಟ್ಟ. ಮಾತಾಡಿದ್ರೆ ಮಾನ ಹೋಗುವ ಭಯದಲ್ಲಿದ್ದಾಳೆ ಆ ಮನವಂತೆ. ನಟನೊಬ್ಬ ಲಂಪಟ ಆದ ಎಂದು ಅತನ ಪತ್ನಿ ಸೇಡಿಗೆ ಬಿದ್ದು ಖಾಕಿಯೊಬ್ಬ ತೆಕ್ಕೆಗೆ ಜಾರಿ ಮಾಡಬಾರದ ಕೆಲ್ಸ್ ಮಾಡಿಬಿಟ್ಟರು. ಮತ್ತೊಬ್ಬ ನಟನ್ ಪತ್ನಿ ರಾದ್ಧಾಂತ ಮಾಡಿ ಡ್ರೈವರ್ ಸಂಗ ಮಾಡಿ ನಟನ ಕೆರಿಯರ್ ಗೆ ಕೊಳ್ಳಿಯಿಟ್ಟುಬಿಟ್ಟಳು. ಕುಟುಂಬದ ಸದಸ್ಯರ ಇಮ್ಮೆಚುರಿಟಿಯಿಂದ ನೆಮ್ಮದಿ ಕೆಡಿಸಿಕೊಂಡ ನಟರು, ಲೀಡರ್ಸ್ ಗಳ ಪಟ್ಟಿ ಸಣ್ಣದು ಎಂದುಕೊಂಡಿದ್ದೀರಾ..?. ನಮ್ಮ ಸಮಾಜದ ಭಿನ್ನ ವ್ಯಕ್ತಿಗಳ ಕಣ್ಣಲ್ಲಿ ಚಂದ್ರ ನಿತ್ಯ ನೇಣುಹಾಕಿಕೊಳ್ಳುತ್ತಾನೆ.

# ರಾಜ್ಯದ ಜೈಲುಗಳಲ್ಲಿ 'ಡ್ರಗ್ಸ್ ಮುಕ್ತ' ಅಭಿಯಾನ: ಕೈದಿಗಳಿಗೆ ಮಾದಕ ವಸ್ತು ಪರೀಕ್ಷೆ, ಡಿಜಿಪಿ ಅಲೋಕ್ ಕುಮಾರ್ ಹೊಸ ಪ್ಲಾನ್!



**ಬೆಂಗಳೂರು:** ರಾಜ್ಯದ ಕಾರಾಗೃಹಗಳಲ್ಲಿ ಮಾದಕ ವಸ್ತುಗಳ ಜಾಲವನ್ನು ಬೇರುಸಹಿತ ಕಿತ್ತೆಸೆಯಲು ಕಾರಾಗೃಹ ಇಲಾಖೆ ಈಗ ಯುದ್ಧೋಪಾದಿಯಲ್ಲಿ ಕಾರ್ಯಾಚರಣೆ ಕೈಗೊಂಡಿದೆ. ಇತ್ತೀಚೆಗೆ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಸ್ವತಃ ಸಿಬ್ಬಂದಿಯೇ ಒಳ ಉಡುಪಿನಲ್ಲಿ ಗಾಂಜಾ ಸಾಗಿಸುತ್ತಿದ್ದ ಪ್ರಕರಣ ಬೆಳಕಿಗೆ ಬಂದ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಕಾರಾಗೃಹ ಇಲಾಖೆ ಡಿಜಿಪಿ ಅಲೋಕ್ ಕುಮಾರ್ ಅವರು, ರಾಜ್ಯದ ಎಲ್ಲಾ ಜೈಲುಗಳಲ್ಲಿ ಕೈದಿಗಳನ್ನು ಡ್ರಗ್ ಟೆಸ್ಟ್‌ಗೆ ಒಳಪಡಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಈ ಮಹತ್ವದ ಯೋಜನೆಗಾಗಿ ನಿಮ್ಹಾನ್ಸ್ (NIMHANS) ಆಸ್ಪತ್ರೆಯ ತಾಂತ್ರಿಕ ಸಹಯೋಗವನ್ನು ಪಡೆಯಲಾಗುತ್ತಿದ್ದು, 'ಡ್ರಗ್ಸ್ ಮುಕ್ತ ಕಾರಾಗೃಹ' ನಿರ್ಮಾಣ ಮಾಡುವುದು ಇಲಾಖೆಯ ಮುಖ್ಯ ಗುರಿಯಾಗಿದೆ.

ಈ ವಿಶೇಷ ಅಭಿಯಾನದ ಅಡಿಯಲ್ಲಿ ಮೊದಲ ಹಂತವಾಗಿ ರಾಜ್ಯದ ಎಲ್ಲಾ ಜೈಲುಗಳಲ್ಲಿರುವ ಸುಮಾರು ಶೇಕಡಾ 10 ರಷ್ಟು ಕೈದಿಗಳನ್ನು ಆಯ್ಕೆ ಮಾಡಿಕೊಂಡು ಪರೀಕ್ಷೆ ನಡೆಸಲಾಗುತ್ತಿದೆ. ಜೈಲು ವೈದ್ಯಾಧಿಕಾರಿಗಳಿಗೆ ಈ ಉದ್ದೇಶಕ್ಕಾಗಿ ವಿಶೇಷ ವೈದ್ಯಕೀಯ ಕಿಟ್‌ಗಳನ್ನು ಒದಗಿಸಲಾಗಿದ್ದು, ಗಾಂಜಾ, ಹೆರೊಯಿನ್ ಮತ್ತು ಕೊಕೈನ್‌ನಂತಹ ನಿಷೇಧಿತ ವಸ್ತುಗಳ ಸೇವನೆಯನ್ನು ಈ ಕಿಟ್ ಮೂಲಕ ಪತ್ತೆಹಚ್ಚಲಾಗುತ್ತದೆ. ಜೈಲಿನೊಳಗೆ ಮಾದಕ ವಸ್ತುಗಳ ಚಲನವಲನಕ್ಕೆ ಬ್ರೇಕ್ ಹಾಕುವುದರ ಜೊತೆಗೆ, ಕೈದಿಗಳ ಆರೋಗ್ಯ ಮತ್ತು ನಡತೆಯಲ್ಲಿ ಸುಧಾರಣೆ ತರುವುದು ಈ ಯೋಜನೆಯ ಆಶಯವಾಗಿದೆ.

ಮಾದಕ ವಸ್ತು ಸೇವನೆ ಪತ್ತೆಯಾದ ಕೈದಿಗಳ ವಿರುದ್ಧ ಸದ್ಯಕ್ಕೆ ಯಾವುದೇ ಹೊಸ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸದಿರಲು ಇಲಾಖೆ ನಿರ್ಧರಿಸಿರುವುದು ಈ ಯೋಜನೆಯ ವಿಶೇಷತೆ. ಬದಲಿಗೆ, ಪಾಸಿಟಿವ್ ವರದಿ ಬಂದ ಕೈದಿಗಳಿಗೆ ತಜ್ಞರಿಂದ ಕೌನ್ಸೆಲಿಂಗ್ ನೀಡಲಾಗುತ್ತದೆ ಮತ್ತು ತೀವ್ರವಾಗಿ ವ್ಯಸನಿಯಾದವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗಿದೆ. ದಂಡನೆಗಿಂತ ಹೆಚ್ಚಾಗಿ ಮಾನವೀಯ ನೆಲಗಟ್ಟಿನಲ್ಲಿ ಕೈದಿಗಳನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸಿ, ಅವರು ಸಮಾಜದ ಮುಖ್ಯವಾಹಿನಿಗೆ ಮರಳಲು ಪ್ರೇರೇಪಿಸುವ ನಿಟ್ಟಿನಲ್ಲಿ ಕಾರಾಗೃಹ ಇಲಾಖೆ ಈ ಮಾದರಿ ಹೆಜ್ಜೆಯನ್ನಿಟ್ಟಿದೆ.



# ರಾಜಭವನ ರಸ್ತೆಯಲ್ಲಿ ನಾರಾಯಣ ಗೌಡರ ಕಾರಿಗೆ ಡಿಕ್ಕಿ

**ಬೆಂಗಳೂರು:** ರಾಜಧಾನಿಯ ಅತ್ಯಂತ ಗಣ್ಯ ಪ್ರದೇಶವಾದ ರಾಜಭವನ ರಸ್ತೆಯಲ್ಲಿ ಮಾಜಿ ಸಚಿವ ನಾರಾಯಣಗೌಡ ಅವರ ಕಾರಿಗೆ ಮತ್ತೊಂದು ಕಾರು ಡಿಕ್ಕಿ ಹೊಡೆದ ಘಟನೆ ಶುಕ್ರವಾರ ಮಧ್ಯಾಹ್ನ ಸಂಭವಿಸಿದೆ. ಮಧ್ಯಾಹ್ನ ಸುಮಾರು 3:30ರ ಹೊತ್ತಿಗೆ ಸಚಿವರ ಕಾರು ರಸ್ತೆ ಪಕ್ಕದಲ್ಲಿ ನಿಂತಿದ್ದಾಗ, ಹಿಂದಿನಿಂದ ಬಂದ ಚಾಲಕನೊಬ್ಬ ಜೋರಾಗಿ ಡಿಕ್ಕಿ ಹೊಡೆದಿದ್ದಾನೆ. ಕಾರು ಚಾಲನೆ ಮಾಡುವಾಗ ಚಾಲಕ ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಿದ್ದುದ್ದೇ ಈ ಅಪಘಾತಕ್ಕೆ ಪ್ರಮುಖ ಕಾರಣ ಎಂದು ತಿಳಿದುಬಂದಿದೆ. ಡಿಕ್ಕಿಯ ರಭಸಕ್ಕೆ ಸಚಿವರ ಕಾರು ಜಖಂಗೊಂಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಅಪಘಾತದಿಂದ ಕೆರಳಿದ ಮಾಜಿ ಸಚಿವ ನಾರಾಯಣಗೌಡ ಅವರು ಕಾರಿನಿಂದ ಇಳಿದು ಚಾಲಕನನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಮೊಬೈಲ್‌ನಲ್ಲಿ ಮಾತನಾಡುತ್ತಾ ಕಾರು ಚಾಲನೆ ಮಾಡುವುದು ಎಷ್ಟು ಅಪಾಯಕಾರಿ ಎಂಬುದನ್ನು ಮನವರಿಕೆ ಮಾಡಿಕೊಟ್ಟ ಅವರು, "ಜೀವ ಹೋದರೆ ಮತ್ತೆ ಬರುತ್ತಾ? ಕಾರು ಹಾನಿಯಾದರೆ ಇನ್ಸೂರೆನ್ಸ್ ಮೂಲಕ ಸರಿಪಡಿಸಬಹುದು, ಆದರೆ ಮನುಷ್ಯರ ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವೇ?" ಎಂದು ಪ್ರಶ್ನಿಸಿದರು. ಅಲ್ಲದೆ, "ಒಂದು ವೇಳೆ ನೀನು ಬೈಕ್ ಸವಾರರಿಗೆ ಗುದ್ದಿದ್ದರೆ ಅವರ ಗತಿ ಏನಾಗುತ್ತಿತ್ತು?" ಎಂದು ಚಾಲಕನ ಬೇಜವಾಬ್ದಾರಿತನದ ಬಗ್ಗೆ ಆಕ್ರೋಶ ಹೊರಹಾಕಿದರು. ಈ ಚಾಲಕ ಸಹಕಾರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರ ಎಂದು ಗುರುತಿಸಲಾಗಿದೆ.

ಘಟನಾ ಸ್ಥಳಕ್ಕೆ ಕಬ್ಬನ್ ಪಾರ್ಕ್ ಸಂಚಾರ ಠಾಣೆಯ ಪೊಲೀಸರು ಆಗಮಿಸುವಷ್ಟರಲ್ಲಿ ಮಾಜಿ ಸಚಿವರು ಅಲ್ಲಿಂದ ತೆರಳಿದ್ದರು. ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ಪೊಲೀಸರು, ಅಪಘಾತದ ಸಂಬಂಧ ಯಾವುದೇ ಅಧಿಕೃತ ದೂರು ದಾಖಲಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸಚಿವರು ಚಾಲಕನಿಗೆ ಬುದ್ಧಿಮಾತು ಹೇಳಿ ಅಲ್ಲಿಂದ ಹೊರಟುಹೋದ ಕಾರಣ ಪ್ರಕರಣ ದಾಖಲಾಗಿಲ್ಲ. ಆದರೆ, ನಗರದ ಹೃದಯಭಾಗದಲ್ಲಿ ಸರ್ಕಾರಿ ನೌಕರನೇ ಸಂಚಾರ ನಿಯಮ ಉಲ್ಲಂಘಿಸಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

# ಜಿಲ್ಲಾಧಿಕಾರಿಗಳ ಡಿಜಿಟಲ್ ಸಹಿ ದುರುಪಯೋಗ;

## 15 ಲಕ್ಷ ರೂ. ನಕಲಿ ಬಿಲ್ ಸೃಷ್ಟಿಸಿದ ಐವರು ನೌಕರರ ಬಂಧನ!



**ಚಿತ್ರದುರ್ಗ:** ಜಿಲ್ಲಾಧಿಕಾರಿ (DC) ಹಾಗೂ ಅಪರ ಜಿಲ್ಲಾಧಿಕಾರಿಗಳ (ADC) ಡಿಜಿಟಲ್ ಸಹಿಯನ್ನು (DSC) ಕಾನೂನುಬಾಹಿರವಾಗಿ ಬಳಸಿ 15 ಲಕ್ಷ ರೂಪಾಯಿ ಮೌಲ್ಯದ ನಕಲಿ ವೇತನ ಬಿಲ್ ಸೃಷ್ಟಿಸಿದ್ದ ಐವರು ಕಚೇರಿ ನೌಕರರನ್ನು ಪೊಲೀಸರು ಬಂಧಿಸಿದ್ದಾರೆ. ಜಿಲ್ಲಾ ನಗರಾಭಿವೃದ್ಧಿ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಸಿಬ್ಬಂದಿ ಈ ಬೃಹತ್ ವಂಚನೆಗೆ ಸಂಚು ರೂಪಿಸಿದ್ದರು. ಬಂಧಿತರನ್ನು ವಿನಯ್ ಶರ್ಮಾ, ವಿಜಯ್ ಕುಮಾರ್, ಬಸವರಾಜ, ಮಹೆಬೂಬ್ ಭಾಷಾ ಹಾಗೂ ವೆಂಕಟೇಶ್ ಎಂದು ಗುರುತಿಸಲಾಗಿದ್ದು, ಪ್ರಕರಣದ ಪ್ರಮುಖ ಆರೋಪಿ ಸೈಯದ್ ಸಾದಿಕ್ ಸದ್ಯ ತಲೆಮರೆಸಿಕೊಂಡಿದ್ದಾನೆ.

ನಗರಾಭಿವೃದ್ಧಿ ಕೋಶದ ಸಿಎಲ್‌ಟಿಸಿ ವಿಭಾಗದ ಈ ಸಿಬ್ಬಂದಿ, ಅಧಿಕಾರಿಗಳ ಗಮನಕ್ಕೆ ಬಾರದಂತೆ ಅವರ ಡಿಜಿಟಲ್ ಸಹಿಯ ಕೀಲಿಯನ್ನು (Key) ಕಳ್ಳತನ ಮಾಡಿ, 15 ಲಕ್ಷ ರೂಪಾಯಿ ವೇತನದ ನಕಲಿ ಬಿಲ್ ಸಿದ್ಧಪಡಿಸಿ ಜಿಲ್ಲಾ ಖಜಾನೆಗೆ ಕಳುಹಿಸಿದ್ದರು. ಆದರೆ, ಬಿಲ್ ಮೇಲಿದ್ದ ಸಹಿಯ ಬಗ್ಗೆ ಅನುಮಾನಗೊಂಡ ಖಜಾನೆ ಇಲಾಖೆಯ ಅಧಿಕಾರಿಗಳು ಆಕ್ಷೇಪಣೆ ಎತ್ತಿದಾಗ ಈ ಹಗರಣ ಬೆಳಕಿಗೆ ಬಂದಿದೆ. ಈ ಸಂಬಂಧ ನಗರಾಭಿವೃದ್ಧಿ ಕೋಶದ ನಿರ್ದೇಶಕಿ ರೇಷ್ಮಾ ಹಾನಗಲ್ ಅವರು ಚಿತ್ರದುರ್ಗ ನಗರ ಠಾಣೆಯಲ್ಲಿ ಅಧಿಕೃತವಾಗಿ ದೂರು ದಾಖಲಿಸಿದ್ದಾರೆ.

ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾಧಿಕಾರಿ ಟಿ. ವೆಂಕಟೇಶ್ ಅವರು, ವಂಚನೆಯಲ್ಲಿ ಭಾಗಿಯಾದ ಗುತ್ತಿಗೆ ನೌಕರರನ್ನು ತಕ್ಷಣವೇ ಕೆಲಸದಿಂದ ವಜಾಗೊಳಿಸಿದ್ದಾರೆ. ಅಲ್ಲದೆ, ಕರ್ತವ್ಯ ಲೋಪ ಎಸಗಿದ ಒಬ್ಬ ಸರ್ಕಾರಿ ನೌಕರನನ್ನು ಅಮಾನತುಗೊಳಿಸಲಾಗಿದೆ. ಸರ್ಕಾರಿ ಕಚೇರಿಯಲ್ಲೇ ಅಧಿಕಾರಿಗಳ ಡಿಜಿಟಲ್ ಸಹಿ ಕಳುವಾಗಿರುವುದು ಆಡಳಿತ ವಲಯದಲ್ಲಿ ತಲ್ಲಣ ಮೂಡಿಸಿದ್ದು, ಈ ಬಗ್ಗೆ ಸಮಗ್ರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ತಲೆಮರೆಸಿಕೊಂಡಿರುವ ಎ1 ಆರೋಪಿಗಾಗಿ ಪೊಲೀಸರು ತಲಾಶ್ ನಡೆಸುತ್ತಿದ್ದಾರೆ.

# ಗ್ಯಾಸ್ ಅಭಾವದ ಬೆನ್ನಲ್ಲೇ ಅರಣ್ಯ ಸಂಪತ್ತಿಗೆ ಕಂಟಕ





**ಬೆಂಗಳೂರು:** ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ನಿರಂತರ ಸಂಘರ್ಷದ ಪರಿಣಾಮವಾಗಿ ಕರ್ನಾಟಕದಲ್ಲಿ ಅಡುಗೆ ಅನಿಲ (LPG) ಪೂರೈಕೆಯಲ್ಲಿ ಭಾರಿ ವ್ಯತ್ಯಯ ಉಂಟಾಗಿದ್ದು, ಇದು ಇದೀಗ ರಾಜ್ಯದ ಅರಣ್ಯ ಸಂಪತ್ತಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಗೃಹ ಬಳಕೆ ಹಾಗೂ ವಾಣಿಜ್ಯ ಸಿಲಿಂಡರ್‌ಗಳ ತೀವ್ರ ಅಭಾವದಿಂದಾಗಿ ಹಳ್ಳಿಗಳು ಹಾಗೂ ವಾಣಿಜ್ಯ ಕೇಂದ್ರಗಳಲ್ಲಿ ಏಕಾಏಕಿ ಸೌದೆಗೆ (ಕಟ್ಟಿಗೆ) ಭಾರಿ ಬೇಡಿಕೆ ಸೃಷ್ಟಿಯಾಗಿದೆ. ಹೋಟೆಲ್, ರೆಸಾರ್ಟ್ ಮತ್ತು ಹೋಂಸ್ಟೇಗಳು ಅಡುಗೆಗಾಗಿ ಸೌದೆಯನ್ನೇ ಅವಲಂಬಿಸುತ್ತಿರುವುದರಿಂದ, ಸೌದೆ ಪೂರೈಸಲು ಕಿಡಿಗೇಡಿಗಳು ಅರಣ್ಯ ಪ್ರದೇಶದ ಮರಗಳಿಗೆ ಕೊಡಲಿ ಹಾಕುವ ಆತಂಕ ಎದುರಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಇಡೀ ಇಲಾಖೆಗೆ ಹೈ-ಅಲರ್ಟ್ ಘೋಷಿಸಿದ್ದಾರೆ.

ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿರುವ ಸಚಿವರು, ಗ್ಯಾಸ್ ಸಿಗುತ್ತಿಲ್ಲ ಎಂಬ ನೆಪವೊಡ್ಡಿ ಯಾವುದೇ ಕಾರಣಕ್ಕೂ ಕಾಡು, ಕಾಡಿನ ಅಂಚು ಅಥವಾ ಸರ್ಕಾರಿ ಜಮೀನುಗಳಲ್ಲಿ ಅಕ್ರಮವಾಗಿ ಮರಗಳನ್ನು ಕಡಿಯಲು ಅವಕಾಶ ನೀಡಬಾರದು ಎಂದು ತಿಳಿಸಿದ್ದಾರೆ. ಒಂದು ವೇಳೆ ಅಕ್ರಮ ಮರ ಕಡಿತ ಅಥವಾ ಸೌದೆ ಸಾಗಾಟ ಕಂಡುಬಂದಲ್ಲಿ, ಆಯಾ ವ್ಯಾಪ್ತಿಯ ಅರಣ್ಯ ವಲಯಾಧಿಕಾರಿಗಳು (RFO) ಮತ್ತು ಸಂಬಂಧಪಟ್ಟ ಸಿಬ್ಬಂದಿಯನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಅಂತಹ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಸಚಿವರು ಖಡಕ್ ಎಚ್ಚರಿಕೆ ನೀಡಿದ್ದಾರೆ. ಈ ಕುರಿತು ಅರಣ್ಯ ಪಡೆ ಮುಖ್ಯಸ್ಥರಿಗೆ (PCCF) ಈಗಾಗಲೇ ಅಧಿಕೃತ ಲಿಖಿತ ನಿರ್ದೇಶನ ರವಾನಿಸಲಾಗಿದೆ.